ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಹಂಚಿಕೆಯಾಗುವ ಸೀಮೆಎಣ್ಣೆಯ ಕೊರತೆಯಿಂದಾಗಿ ಬಿಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ ಹಂಚುವುದೇ ಕಷ್ಟಸಾಧ್ಯವಾಗಿರುತ್ತದೆ. ಹೊಸ ಪಡಿತರ ಚೀಟಿದಾರರ ಅಗತ್ಯವನ್ನು ಪೂರೈಸಲು ಇನ್ನೂ ಹೆಚ್ಚಿನ ಸೀಮೆಎಣ್ಣೆ ಅಗತ್ಯವಿರುತ್ತದೆ. ಆದ್ದರಿಂದ ಪ್ರಸ್ತುತದಲ್ಲಿ ಕೊಡುಗೆ ಜಿಲ್ಲೆಗೆ ಹೆಚ್ಚುವರಿಯಾಗಿ ಸೀಮೆಎಣ್ಣೆ ವಿತರಣೆ ಸಾಧ್ಯವಾಗುವುದಿಲ್ಲ.

ಅನುಷ್ಠಾನಗೊಳಿಸಿದ ಯೋಜನೆ

740 (1458); ಶ್ರೀ ಅಪ್ಪಚ್ಚು ರಂಜನ್ ಎಂ. ಪಿ. (ಮಡಿಕೇರಿ)

(ಅ) ಕಳೆದ 2 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಕೊಡಗು ಜಿಲ್ಲೆ ಸೋಮವಾರಪೇಟೆ ಮತ್ತು ಮಡಿಕೆರಿ ತಾಲ್ಲೂಕಿಗೆ ಅನುಷ್ಠಾನ ಗೊಳಿಸಿದ ಯೋಜನೆಗಳು ಯಾವುವು;

(ಆ) ಯೋಜನೆಗಳಿಗೆ ವೆಚ್ಚ ಮಾಡಿದ ಹಣವೆಷ್ಟು; (ಯೋಜನೆವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿರುವ ಒಟ್ಟು ವಸತಿ ಶಾಲೆಗಳು ಎಷ್ಟು;

(ಈ) ಇದರ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲು ಕಾರಣವೇನು;

(ಉ) ಯಾವ ಮಾನದಂಡದ ಆಧಾರದ ಮೇಲೆ ಖಾಸಗಿಯವರಿಗೆ ನೀಡ ಲಾಗುತ್ತದೆ;

(ಊ) ಯಾವ ಯಾವ ಸಂಸ್ಥೆಗಳಿಗೆ ಮೇಲ್ವಿಚಾರಣೆಗೆ ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

(ಋ) ಕೊಡಗು ಜಿಲ್ಲೆಯಲ್ಲಿರುವ ಒಟ್ಟು ವಸತಿ ಶಾಲೆಗಳು ಎಷ್ಟು;

(ಎ) ಎಷ್ಟು ವಸತಿ ಶಾಲೆಗಳು ಸ್ವಂತ ಕಟ್ಟಡ ಹೊಂದಿದೆ;

(ಏ) ಎಷ್ಟು ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ;

(ಐ) ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ಪೂರ್ಣ ವಿವರ ನೀಡುವುದು)

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

(ಅ) ಸಮಾಜ ಕಲ್ಯಾಣ ಇಲಾಖೆ: ಕಳೆದ 2 ವರ್ಷಗಳಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಕೊಡಗು ಜಿಲ್ಲೆಯ ಸೋಮವಾರ ಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳು ಈ ಕೆಳಕಂಡಂತಿದೆ.

ಕ್ರ. ಸಂ.	ಯೋಜನೆಯ ಹೆಸರು
1	ಕಾರ್ಯನಿರ್ವಾಹಕ ಸಿಬ್ಬಂದಿ
2	ಪರಿಶಿಷ್ಟ ಜಾತಿಯವರಿಗೆ ನಿವಾಸಿ ಶಾಲೆಗಳು
3	ಪ. ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ
4	ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ
5	ನರ್ಸರಿ ಹಾಗೂ ಮಹಿಳಾ ಕಲ್ಯಾಣ ಕೇಂದ್ರಗಳು
6	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
7	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
8	ಪರಿಶಿಷ್ಟ ಜಾತಿ / ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳ ನಿರ್ವಹಣೆ
9	ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ / ಇತರೆ ರಿಯಾಯ್ತಿಗಳು / ಶ್ರೇಷ್ಠತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯ

10	ಹೊಲಿಗೆ ತರಬೇತಿ ಕೇಂದ್ರಗಳು
11	ಪರಿಶಿಷ್ಟ ಜಾತಿಯ ಕಾನೂನು ಪದವಿದರರಿಗೆ ಪ್ರೋತ್ಸಾಹ
12	ಕಟ್ಟಡಗಳ ನಿರ್ವಹಣೆ
13	ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ
14	ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ
15	ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ
16	ಅಸ್ಪಶೃತಾ ನಿವಾರಣೆ ಹಾಗೂ ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹ ಧನ
17	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ
18	ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ
19	ಪರಿಶಿಷ್ಟ ಜಾತಿಯ ಕುಟುಂಬಗಳಿಗೆ ಸಹಾಯ ಧನ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ: ಕೊಡಗು ಜಿಲ್ಲೆಯ ಸೋಮವಾರ ಪೇಟೆ ಮತ್ತು ಮಡಿಕೇರಿ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳು ಈ ಕೆಳಕಂಡಂತಿದೆ.

1. ಗಿರಿಜನ ಉಪಯೋಜನೆಯಡಿ ಕ್ರೋಢಿಕರಿಸಿದ ಅನುದಾನ
2. ಭಾರತ ಸಂವಿಧಾನ ಅನುಚ್ಛೇದ 275 (1)
3. ಮೂಲನಿವಾಸಿ ಜೇನುಕುರುಬ ಜನಾಂಗದವರ ಅಭಿವೃದ್ಧಿ ಯೋಜನೆ

4. ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕು ಪತ್ರ ಪಡೆದಿರುವ ಹಾಡಿಗಳಿಗೆ ಮೂಲಭೂತ ಸೌಕರ್ಯ

5. ಪೌಷ್ಟಿಕಾಂಶ ಆಹಾರ ವಿತರಣೆ

6. ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ವಿದ್ಯಾರ್ಥಿ ವೇತನ/ಧನಸಹಾಯ/ಕಟ್ಟಡಗಳ ದುರಸ್ಥಿ/ ಪುಸ್ತಕ ಭಂಡಾರ/ ಆಶ್ರಮ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಯೋಜನೆ/ಯೋಜನೇತರದಡಿ ಬಿಡುಗಡೆಯಾದ ಅನುದಾನ.

7. ಲಿಂಕ್ ಡಾಕ್ಯೂಮೆಂಟ್‌ನಲ್ಲಿ ತಾಲ್ಲೂಕು ಪಂಚಾಯತ್ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಹಾಗೂ ವಿವಿಧ ಇಲಾಖೆಗಳ ಮೂಲಕ ಫಲಾನುಭವಿಗಳಿಗೆ ಧನಸಹಾಯ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ : ಅ) ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಹಾಗೂ ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಒಟ್ಟು 06 ವಸತಿ ಶಾಲಾ / ಕಾಲೇಜುಗಳ ಕಾರ್ಯನಿರ್ವಹಿಸುತ್ತಿದ್ದು, ವಸತಿ ಶಾಲೆಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ.

ಆ) ಮಡಿಕೇರಿ ತಾಲ್ಲೂಕಿನ ಕ್ಯಾತೆ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಸಂಕೀರ್ಣ ಕಾಮಗಾರಿಯನ್ನು ಕೈಗೆತ್ತಿಕೊಂಡು ಪ್ರಗತಿಯಲ್ಲಿದೆ.

(ಆ) ಸಮಾಜ ಕಲ್ಯಾಣ ಇಲಾಖೆ: ಯೋಜನೆಗಳಿಗೆ ವೆಚ್ಚ ಮಾಡಿದ ಹಣದ ವಿವರಗಳನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ: ಯೋಜನೆಗಳಿಗೆ ಬಿಡುಗಡೆ ಮಾಡಿದ ಅನುದಾನದ ವಿವರವನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: ಅ) ವಸತಿ ಶಾಲೆಗಳ ನಿರ್ವಹಣೆಗೆ ಕಳೆದ 2 ವರ್ಷಗಳಲ್ಲಿ ವೆಚ್ಚ ಮಾಡಿದ ಹಣದ ವಿವರಗಳನ್ನು ಈ ಕೆಳಕಂಡಂತಿದೆ.

ತಾಲ್ಲೂಕುಗಳ ವಿವರ	ವಸತಿ ಶಾಲೆಗಳ ವಿವರಗಳು	ಭರಿಸಿದ ವೆಚ್ಚ	
		2012–13	2013–14
ಸೋಮವಾರಪೇಟೆ	ಹಿಂ. ವರ್ಗದ ಮೊ. ದೇ. ವ. ಶಾಲೆ, ಆಲೂರು ಸಿದ್ದಾಪೂರ	46.20	34.17
	ಹಿಂ. ವರ್ಗದ ಮೊ. ದೇ. ವ. ಶಾಲೆ, ಕೂಡಿಗೆ	45.86	24.25
	ಅ. ಸಂಖ್ಯಾತರ ಮೊ. ದೇ. ವ. ಶಾಲೆ, ಕೂಡ್ಲಿಪೇಟೆ	36.81	35.32
	ಮೊ. ದೇ. ವ. ಶಾಲೆ, ಬಸವನಹಳ್ಳಿ, (ಸಾಮಾನ್ಯ)	35.66	41.20
ಮಡಿಕೇರಿ	ಹಿಂ. ವರ್ಗದ ಪ. ಪೂ. ಕಾಲೇಜು, ಮಡಿಕೇರಿ	34.15	27.07
	ಹಿಂ. ವರ್ಗದ ಅ.ಬಿ.ವಾ.ವ.ಶಾಲೆ. ಭಾಗಮಂಡಲ	–	
	ಒಟ್ಟು	**198.68**	**162.01**

ಈ ವಸತಿ ಶಾಲೆಯು 2013–14ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದು, ಅನುದಾನ ಬಿಡುಗಡೆಗೆ ಕ್ರಮವಹಿಸಲಾಗಿದೆ.

(ಆ) ಮಡಿಕೇರಿ ತಾಲ್ಲೂಕಿನ ಗರಗಂದೂರು ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಸಂಕೀರ್ಣ ಕಾಮಗಾರಿಯ ಅನುಮೋದಿತ ಮೊತ್ತವು ` 527.62 ಲಕ್ಷಗಳಾಗಿದ್ದು, ಈವರೆವಿಗೂ `320 ಲಕ್ಷಗಳ ವೆಚ್ಚ ವನ್ನು ಭರಿಸಲಾಗಿದೆ.

(ಇ) ಸಮಾಜ ಕಲ್ಯಾಣ ಇಲಾಖೆಯವತಿಯಿಂದ ರಾಜ್ಯದಲ್ಲಿ 68 ಸರ್ಕಾರಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿರುತ್ತದೆ. (1 ರಿಂದ 5ನೇ ತರಗತಿ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: ರಾಜ್ಯದಲ್ಲಿ ಒಟ್ಟು 524 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದೆ. (6 ರಿಂದ 10ನೇ ತರಗತಿ)

(ಈ) ಸಮಾಜ ಕಲ್ಯಾಣ ಇಲಾಖೆಯವತಿಯಿಂದ ನಡೆಸಲಾಗುತ್ತಿರುವ ಸರ್ಕಾರಿ ವಸತಿ ಶಾಲೆಗಳು ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಿರುವುದಿಲ್ಲ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: ಈ ವಸತಿ ಶಾಲೆಗಳ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಲಿಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: ಈ ವಸತಿ ಶಾಲೆಗಳ ನಿರ್ವಹಣೆಯನ್ನು ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ನಿರ್ವಹಿಸುತ್ತಿದೆ.

(ಉ) ಉದ್ಭವವಾಗುವುದಿಲ್ಲ.

(ಊ) ಸಮಾಜ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ನಿರ್ವಹಿಸುತ್ತಿದೆ.

(ಋ) ಸಮಾಜ ಕಲ್ಯಾಣ ಇಲಾಖೆಯವತಿಯಿಂದ ಕೊಡಗು ಜಿಲ್ಲೆಯಲ್ಲಿ ಒಂದು ಸರ್ಕಾರಿ ವಸತಿ ಶಾಲೆಯನ್ನು ನಡೆಸಲಾಗುತ್ತಿದ್ದು, ಸ್ವಂತ ಕಟ್ಟಡವನ್ನು ಹೊಂದಿರುತ್ತದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: ಕೊಡಗು ಜಿಲ್ಲೆಯಲ್ಲಿ 07 ವಸತಿ ಶಾಲೆಗಳು ಹಾಗೂ 01 ಪದವಿ ಪೂರ್ವ ಕಾಲೇಜು ಕಾರ್ಯ ನಿರ್ವಹಿಸುತ್ತಿದೆ.

(ಎ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: 04 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಹೊಂದಿದೆ.

(ಏ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ: 02 ವಸತಿ ಶಾಲೆಗೆ 01 ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡವಿರುವುದಿಲ್ಲ.

(ಐ) **ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:**

ಅ) 01 ಪದವಿ ಪೂರ್ವ ಕಾಲೇಜಿಗೆ ಗರಗಂದೂರು ಗ್ರಾಮದಲ್ಲಿ ಕಾಲೇಜು ಸಂಕೀರ್ಣ ನಿರ್ಮಾಣವು ಪ್ರಗತಿಯಲ್ಲಿದೆ.

ಆ) ಹಿಂ. ವರ್ಗದ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಭಾಗ ಮಂಡಲ ಇದಕ್ಕೆ ಜಮೀನು ಲಭ್ಯವಿದ್ದು ಮುಂದಿನ ಕ್ರಮ ವಹಿಸಲಾಗಿದೆ.

ಇ) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ವಿರಾಜ ಪೇಟೆ ಇದಕ್ಕೆ ಆರ್. ಜಿ. ಗ್ರಾಮದಲ್ಲಿ ಜಮೀನು ಲಭ್ಯವಿದೆ ಮತ್ತು ಹಿಂ. ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕೂಡಿಗೆ ಜಮೀನು ಲಭ್ಯವಿದ್ದು, ಟೆಂಡರ್‌ಗಳನ್ನು ಕರೆಯಲಾಗಿದ್ದು, ಅಂತಿಮ ಹಂತದಲ್ಲಿದೆ.

ಅನುಬಂಧ – 1

2012–13 ಮತ್ತು 2013–14ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ಹಾಗೂ ಸೋಮವಾರ ಪೇಟೆ ತಾಲ್ಲೂಕುಗಳಲ್ಲಿ ಯೋಜನೆವಾರು ಮಾಡಿದ ವೆಚ್ಚದ ವಿವರ.

ಕ್ರ. ಸಂ.	ಯೋಜನೆಯ ಹೆಸರು	ಮಡಿಕೇರಿ ತಾಲ್ಲೂಕು		ಸೋಮವಾರ ಪೇಟೆ ತಾಲ್ಲೂಕು	
		2012–13	2013–14	2012–13	2013–14
	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು ಯೋಜನೆ				
1	ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ	3.33	3.60	0.98	1.98
2	ಪರಿಶಿಷ್ಟ ಜಾತಿ / ಮೆಟ್ರಿಕ್ ನಂತರದ ಸರ್ಕಾರಿ	0.00	0.00	0.00	2.57

	ವಿದ್ಯಾರ್ಥಿನಿಲಯಗಳ ನಿರ್ವಹಣೆ				
3	ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯ್ತಿಗಳು/ಶ್ರೇಷ್ಠತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯ	0.43	1.08	0.91	1.54
	ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳು ಯೋಜನೇತರ				
1	ನಿರ್ದೇಶನ ಮತ್ತು ಆಡಳಿತ ಕಾರ್ಯನಿರ್ವಾಹಕ ಸಿಬ್ಬಂದಿ	9.01	11.51	10.01	9.84
2	ಕಾಲೇಜು ವಿದ್ಯಾರ್ಥಿಗಳಿಗೆ ಪುರಸ್ಕಾರ/ಇತರೆ ರಿಯಾಯ್ತಿಗಳು/ ಶ್ರೇಷ್ಟತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ	0.15	0.15	0.00	0.00
3	ಪರಿಶಿಷ್ಟ ಜಾತಿಯವರಿಗಾಗಿ ನಿವಾಸಿ ಶಾಲೆಗಳು	12.78	14.33	0.00	0.00
4	ಪರಿಶಿಷ್ಟ ಜಾತಿಯವರಿಗಾಗಿ ನಿವಾಸಿ ಶಾಲೆಗಳು	1.680	0.00	0.00	0.00
5	ಪ.ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ಒಪ್ಪಿತ ವೆಚ್ಚ)	9.78	7.99	25.25	27.62
6	ಸರ್ಕಾರಿ ಕಾಲೇಜು ವಿದ್ಯಾರ್ತಿನಿಲಯಗಳ ನಿರ್ವಹಣೆ	7.23	6.28	3.28	4.53
	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು ಯೋಜನೆ				
1	ಪರಿಶಿಷ್ಟ ಜಾತಿಯ ಕಾನೂನು ಪಧವಿಧರರಿಗೆ ಪ್ರೋತ್ಸಾಹ	0.24	0.18	0.00	0.52

2	ಕಟ್ಟಡಗಳ ನಿರ್ವಹಣೆ	3.00	0.00	6.00	5.90
3	ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ	0.99	0.67	1.39	2.98
4	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	3.00	4.39	4.14	7.35
5	ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	0.13	0.00	0.00	0.00
6	ಅಸ್ಪೃಶ್ಯತಾ ನಿವಾರಣೆ ಹಾಗೂ ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ	0.75	1.35	1.00	4.25
7	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರದ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	9.00	0.00	0.00	0.00
8	ಪರಿಶಿಷ್ಟ ಜಾತಿಯ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ	15.00	6.03	17.00	15.95
9	ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸಹಾಯಧನ	4.90	7.53	5.25	5.40
	ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು ಯೋಜನೇತರ				
1	ನರ್ಸರಿ ಹಾಗೂ ಮಹಿಳಾ ಕಲ್ಯಾಣ ಕೇಂದ್ರಗಳು	1.50	1.84	3.93	5.30
2	ಮೆಟ್ರಿಕ್ ಪೂರ್ವ	20.32	27.78	60.2	66.73

	ವಿದ್ಯಾರ್ಥಿನಿಲಯಗಳು				
3	ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	3.25	4.00	16.85	8.50
4	ಅಶುದ್ಧ ವೃತ್ತಿಯಲ್ಲಿ ತೊಡಗಿರುವವರ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	0.00	0.02	0.00	0.00

ಅನುಬಂಧ – 2

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಕ್ರ. ಸಂ.	ವರ್ಷ	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಖರ್ಚಾದ ಅನುದಾನ (ರೂ. ಲಕ್ಷಗಳಲ್ಲಿ)	ಷರಾ
1	2012–13	ಗಿರಿಜನ ಉಪಯೋಜನೆಯಡಿ ಕ್ರೋಢಿಕರಿಸಿದ ಅನುದಾನ	75.00	64.98	–
	2013–14		64.00	0.00	ಅಂದಾಜು ಪಟ್ಟಿ ಮತ್ತು ನಕ್ಷೆ ಸಿದ್ಧಪಡಿಸಿ ಸಲ್ಲಿಸಲು ಪಿ.ಆರ್.ಇ.ಡಿ. ಮಡಿಕೇರಿ ರವರಿಗೆ ತಿಳಿಸಲಾಗಿದೆ.
2	2012–13	ಭಾರತ ಸಂವಿಧಾನ ಅನುಚ್ಛೇಧ 275 (1)	128.00	52.20	ಕಾಮಗಾರಿಗಳು ಪ್ರಗತಿಯಲ್ಲಿದೆ.
	2013–14		55.00	0.00	–
3	2012–13	ಮೂಲನಿವಾಸಿ ಜೇನುಕುರುಬ	416.17	0.00	ಬಿಡುಗಡೆಯಾದ ಒಟ್ಟು

	2013–14	ಜನಾಂಗದವರ ಅಭಿವೃದ್ಧಿ ಯೋಜನೆ	99.91.	0.00	ಅನುದಾನದಲ್ಲಿ ವೀರಾಜಪೇಟೆಗೆ ಶೇಕಡಾ 60 ಹಾಗೂ ಸೋಮವಾರಪೇಟೆಗೆ 40 ರ ಅನುದನದಲ್ಲಿ ಕ್ರಿಯಾ ಯೋಜನೆ ಅನುಮೋದನೆ ಪಡೆದು ಕಾರ್ಯಕ್ರಮ ಅನುಷ್ಠನಗೊಳಿಸಲಾಗುವುದು.
4	2012–13	ಅರಣ್ಯ ಹಕ್ಕು ಪತ್ರ ಪಡೆದಿರುವ ಹಾಡಿಗಳಿಗೆ ಮೂಲಭೂತ ಸೌಕರ್ಯ	150.00	15.00	ಕಾರ್ಯಕ್ರಮಗಳು ಪ್ರಗತಿಯಲ್ಲಿದೆ.
	2013–14		220.94	0.00	ಕ್ರಿಯಾ ಯೋಜನೆ ಸಿದ್ಧಪಡಿಸಲಾಗಿದ್ದು, ಜಿಲ್ಲಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಕಾರ್ಯಕ್ರಮ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

5	2012–13	ಪೌಷ್ಟಿಕಾಂಶ ಆಹಾರ ವಿತರಣೆ	467.45	457.30	–
	2013–14		540.00	0.00	ಜೂನ್ 2014ರ ಮಾಹೆಯಿಂದ ಪೌಷ್ಟಿಕ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲಾಗುತ್ತಿದೆ.
6	2012–13	ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯೂಮೆಂಟ್‌ನಲ್ಲಿ ವಿದ್ಯಾರ್ಥಿವೇತನ/ಧನಸಹಾಯ / ಕಟ್ಟಡಗಳ ದುರಸ್ಥಿ/ ಪುಸ್ತಕ ಭಂಡಾರ/ಆಶ್ರಮ ಶಾಲೆ ಹಾಗೂ ವಿದ್ಯಾರ್ತಿನಿಲಯಗಳ ನಿರ್ವಹಣೆಗೆ ಯೋಜನೆ / ಯೋಜನೇತರದಡಿ ಬಿಡುಗಡೆಯಾದ ಅನುದಾನ.	155.36	152.67	–
	2013–14		183.32	173.90	–
7	2012–13	ಲಿಂಕ್ ಡಾಕ್ಯೂಮೆಂಟ್‌ನಲ್ಲಿ ತಾಲ್ಲೂಕು ಪಂಚಾಯತ್ ಗಿರಿಜನ ಉಪಯೋಜನೆಯಡಿ	29.70	29.63	–
	2013–14		30.26	27.78	–

		ಪರಿಶಿಷ್ಟ ಪಂಗಡದ ಕಾಲೋನಿಗೆ ಮೂಲಭೂತ ಸೌಕರ್ಯ ಹಾಗೂ ವಿವಿಧ ಇಲಾಖೆಗಳ ಮೂಲಕ ಫಲಾನುಭವಿಗಳಿಗೆ ಧನಸಹಾಯ			